## **ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**C.C.** 1634-22

ಪಿ.ಡಬ್ಲ್ಯೂ- 3

ಸಿ.ಡಬ್ಲ್ಯೂ-2

ಸಾಕ್ಷಿದಾರರ ಹೆಸರು : ಹಿತೇಶ್ ಬಾಫಣಾ

ತಂದೆಹೆಸರು : ಮುಖೇಶಕುಮಾರ

ವಯಸ್ಸು : 26 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಹುಬ್ಬಳ್ಳಿ.

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 23.2.2022 ರಂದು ಬೆಳಿಗ್ಗೆ 9 - 10 ಗಂಟೆವರೆಗೆ ಚಾಸಾ-3 ರವರಿಗೆ ಅಪಘಾತವಾದ ಸ್ಥಳಕ್ಕೆ ಕರೆಸಿದ್ದರು, ಆ ಸ್ಥಳವನ್ನು ಚಾಸಾ-10 ರವರು ಅಪಘಾತದ ಬಗ್ಗೆ ಮಾಹಿತಿ ನೀಡಿ ತೋರಿಸಿದರು.

ಪೋಲಿಸರು ಆ ಸ್ಥಳದ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಆ ಸ್ದಳ ಕೇಶ್ವಾಪೂರ ಸರ್ಕಲ್ ಹತ್ತಿರ ಇದೆ. ಈಗ ನಿಪಿ.3 ಆ ಸ್ಥಳದ ಪಂಚನಾಮೆ ನೋಡುತ್ತಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.3-ಬಿ ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ನೋಡುತ್ತಿದ್ದು, ಅವುಗಳ ಪೈಕಿ ನಿಪಿ.4 ರಲ್ಲಿ ನಾನು ಕ್ರಮಸಂಖ್ಯೆ-1 ರಲ್ಲಿ ಕಾಣಿಸುತ್ತಿದ್ದೇನೆ. ಆ ಭಾವಚಿತ್ರಗಳನ್ನು ಈಗಾಗಲೇ ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು.

ಅದೇ ದಿನ ತದನಂತರ ಪೋಲಿಸರು ನಮಗೆ ಪೋಲಿಸ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಬೆಃ 11 - 12 ಗಂಟೆಯ ಅವಧಿಯಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಅಪಘಾತಪಡಿಸಿದ ಕಾರ್ ಮತ್ತು ಅಪಘಾತಕ್ಕೆ ಒಳಗಾದ ಸ್ಕೂಟಿ ಕುರಿತು ಜಪ್ತಿ ಪಂಚನಾಮೆ ಮಾಡಿದರು, ಆ ಪಂಚನಾಮೆ ಮೇಲೆ ನನ್ನ ಸಹಿ ಪಡೆದರು. ಈಗ ಆ ಪಂಚನಾಮೆ ನೋಡುತ್ತಿದ್ದು ಅದನ್ನು ನಿಪಿ.8 ಎಂದು,ಸಾಕ್ಷಿ ಸಹಿಯನ್ನು ನಿಪಿ.8-ಎ ಎಂದು ಗುರುತಿಸಲಾಯಿತು.

ಅದೇ ಕಾಲಕ್ಕೆ ಪೋಲಿಸರು ಒಂದು ಭಾವಚಿತ್ರ ತೆಗೆದರು, ಆ ಭಾವಚಿತ್ರದಲ್ಲಿ ಕ್ರಮಸಂಖ್ಯೆಃ 1 ರಲ್ಲಿ ನಾನು ಕಾಣಿಸುತ್ತಿದ್ದೇನೆ. ಈಗ ಭಾವಚಿತ್ರವನ್ನು ನಿಪಿ.9 ಎಂದು ಗುರುತಿಸಲಾಯಿತು. ಅದರಲ್ಲಿರುವ ಕಾರ್ ಮತ್ತು ಬೈಕ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಐ ಪಿ ವಕೀಲರಿಂದಃ**

ಪೋಲಿಸರು ನೀವು ಪಂಚರಾಗಿ ಹಾಜರಾಗಿ ಎಂದು ನಮಗೆ ಮೊದಲೇ ಯಾವುದೇ ನೋಟಿಸು ಕೊಟ್ಟಿರಲಿಲ್ಲ. ನಾನು ಆ ದಿನ ಮುಃ 10 ಗಂಟೆಗೆ ಸ್ಥಳಕ್ಕೆ ಹೋಗಿದ್ದೆ. ಸುಮಾರು 1 ತಾಸು ಅಲ್ಲಿದ್ದೆ. ಪಂಚನಾಮೆ ಬರೆಯಲು ನಾನೇ ಮಾಹಿತಿ ಕೊಟ್ಟೆ. ಆ ಸ್ಥಳದ ಪೂರ್ವ - ಪಶ್ಚಿಮವಾಗಿ ರಸ್ತೆ ಇದೆ ಮತ್ತು ಹತ್ತಿರದಲ್ಲಿ ಉತ್ತರ -ದಕ್ಷಿಣವಾಗಿ ಒಂದು ರಸ್ತೆ ಇದೆ. ಉತ್ತರಕ್ಕೆಃ ಬೇಕರಿ ಇದೆ, ದಕ್ಷಿಣಕ್ಕೆಃ ರಸ್ತೆ ಇದೆ. ಆ ಗುನ್ಹೆ ಸ್ಥಳದ ಪಂಚನಾಮೆ ಎಷ್ಟು ಪುಟಗಳು ಇದ್ದವು ಎಂದು ನನಗೆ ಗೊತ್ತಿಲ್ಲ, ಆದರೆ ಅದರ ಮೇಲೆ ನಾನು ಒಂದು ಸಹಿ ಮಾಡಿದ್ದೇನೆ. ಆ ಪಂಚನಾಮೆಗೆ ನಾನು ಒಬ್ಬನೇ ಸಹಿ ಮಾಡಿದ್ದೇನೆಂದರೆ ಸರಿಯಲ್ಲ, ಆದರೆ ನನ್ನ ಜೊತೆ ಅರಿಹಂತ ಎನ್ನುವವರು ಸಹ ಸಹಿ ಮಾಡಿದ್ದಾರೆ. ಪೋಲಿಸರು ಹೇಳಿದ ಮೇರೆಗೆ ನನಗೆ ಆ ಸ್ಥಳದ ಬಗ್ಗೆ ಗೊತ್ತಾಗಿದೆ ಅಂದರೆ ಸರಿಯಲ್ಲ, ಅಲ್ಲಿ ಹಾಜರಿದ್ದ ಪಾಯಲ್ ಇವರು (ಚಾಸಾ-10 ಇವರು) ಹೇಳಿದ ಮೇರೆಗೆ ಆ ಸ್ದಳದ ಬಗ್ಗೆ ಗೊತ್ತಾಗಿದೆ. ಘಟನಾ ಸ್ದಳದಿಂದ ನಮ್ಮ ಮನೆಗೆ ಸುಮಾರು 200 - 300 ಮೀಟರ ದೂರವಿದೆ. ಚಾಸಾ-10 ಇವಳು ನನಗೆ ಹತ್ತಿರದ ಸಂಬಂಧಿಕಳು ಅಂದರೆ ಸರಿ. ಆ ದಿನ ನಾನು ಮತ್ತು ಸಹ ಪಂಚ ಆ ಸ್ಥಳಕ್ಕೆ ಹೋಗೆಯೇ ಇಲ್ಲ ಮತ್ತು ನಮ್ಮ ಮುಂದೆ ಆ ಸ್ದಳದ ಪಂಚನಾಮೆ ಮಾಡಿಯೇ ಇಲ್ಲ ಅಂತಾ ಸೂಚಿಸುವ ನಿಮ್ಮ ಸಲಹೆಗಳು ಸರಿಯಲ್ಲ.

ಆ ದಿನ ನಾವು ಪೋಲಿಸ ಠಾಣೆಗೆ ಹೋದಾಗ ಮಃ 12 ಗಂಟೆಯಾಗಿತ್ತು. ಆ ಠಾಣೆಗೆ ಬರಲು ಪೋಲಿಸರು ನನಗೆ ಲಿಖಿತ ನೋಟಿಸು ಕೊಟ್ಟಿರಲಿಲ್ಲ. ಆ ಕಾರ್ ನಂಬರನ್ನು ಆ ದಿನ ನೋಡಿದ್ದೆ, ಆದರೆ ಈಗ ನನಗೆ ನೆನಪಿಲ್ಲ, ಆದರೆ ಅದು ಚೆವರಲೆಟ್ ಕಂಪನಿ ಕಾರ್ ಇತ್ತು. ಆ ಪಂಚನಾಮೆ ಅಂದರೆ ನಿಪಿ.8 ರಲ್ಲಿ ಏನು ಬರೆಯಲಾಗಿದೆ ಎಂದು ನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

ಆ ಪಂಚನಾಮೆ ಕಾಲಕ್ಕೆ ಭಾವಚಿತ್ರ ತೆಗೆದಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆ ಠಾಣೆಗೆ ಹೋಗಿಯೇ ಇರಲಿಲ್ಲ, ಮತ್ತು ನನ್ನ ಮುಂದೆ ನಿಪಿ. 8 ರಂತೆ ಪಂಚನಾಮೆ ಮಾಡಿಯೇ ಇಲ್ಲ ಅಂದರೆ ಸರಿಯಲ್ಲ. ಚಾಸಾ-10 ರವರು ನನ್ನ ಸಂಬಂಧಿಕರಾದ ಕಾರಣ ಅವಳಿಗೆ ವಿಮೆ ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**C.C.** 1634-22

ಪಿ.ಡಬ್ಲ್ಯೂ- 4

ಸಿ.ಡಬ್ಲ್ಯೂ-8

ಸಾಕ್ಷಿದಾರರ ಹೆಸರು : ಅಭಿಷೇಕ ಜೈನ್

ತಂದೆ ಹೆಸರು : ಅನಿಲ್ ಜೈನ್

ವಯಸ್ಸು : 30 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಕೇಶ್ವಾಪೂರ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 24.2.2022 ರಂದು ಮಃ 2 ಗಂಟೆಗೆ ನನ್ನನ್ನು ಮತ್ತು ಸಹ ಪಂಚನನ್ನು ಪೋಲಿಸರು ತಮ್ಮ ಪೂರ್ವ ಸಂಚಾರಿ ಪೋಲಿಸ ಠಾಣೆಗೆ ಕರೆಸಿದ್ದರು. ಅಲ್ಲಿ ಅವರ ವಶದಲ್ಲಿ ಆರೋಪಿ ಇದ್ದ. ಆರೋಪಿಯು ನಮಗೆ ಅಪಘಾತಪಡಿಸಿದ ಸ್ಥಳಕ್ಕೆ ಕರೆದುಕೊಂಡು ಹೋದರು. ಇದೇ ಸ್ಥಳದಲ್ಲಿ ಅಪಘಾತ ಮಾಡಿರುವುದಾಗಿ ಸ್ಥಳ ತೋರಿಸಿದರು. ಅದು ಸರ್ವೋದಯ ಸರ್ಕಲ್ ಬಳಿ ಇದೆ. ಮಃ 2.50 ರಿಂದ 3.50 ಗಂಟೆವರೆಗೆ ಆ ಸ್ಥಳದ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು.

ಈಗ ಆ ಪಂಚನಾಮೆ ನೋಡುತ್ತಿದ್ದು, ಅದನ್ನು ನಿಪಿ.10 ಎಂದು ಸಾಕ್ಷಿ ಸಹಿಯನ್ನು ನಿಪಿ.10-ಎ ಎಂದು, ಆ ಬಗ್ಗೆ ಒಂದು ಫೋಟೋ ತೆಗೆದಿದ್ದು, ಆ ಭಾವಚಿತ್ರವನ್ನು ನಿಪಿ.11 ಎಂದು ಗುರುತಿಸಲಾಯಿತು.

ದಿಃ 3.3.2022 ರಂದು ಬೆಃ 11-12 ಗಂಟೆವರೆಗೆ ಪೋಲಿಸರು ನಮಗೆ ಪುನಃ ತಮ್ಮ ಪೋಲಿಸ ಠಾಣೆಗೆ ಕರೆಸಿದ್ದರು. ಮೃತಳ ಶವ ತನಿಖೆಯ ಕಾಲಕ್ಕೆ ಕಾಯ್ದಿರಿಸಿದ ಮಿಶ್ರಾಗಳ ಎರಡು ಬಾಟಲಿಗಳನ್ನು ಪಂಚನಾಮೆ ಮಾಡಿ ಆರ್ ಎಫ್ ಎಸ್ ಎಲ್ ವರದಿಗೆ ಕಳುಹಿಸಿ ಕೊಡುವುದಾಗಿ ಹೇಳಿದರು. ಅದರಂತೆ ಆ ಬಾಟಲಿಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡು ಒಂದು ಪಂಚನಾಮೆ ಮಾಡಿದರು. ಆ ಪಂಚನಾಮೆ ಮೇಲೆ ನನ್ನ ಸಹಿ ಪಡೆದರು. ಆ ಪಂಚನಾಮೆಗಳನ್ನು ನಿಪಿ.12 ಎಂದು ಸಾಕ್ಷಿ ಸಹಿಗಳನ್ನು ನಿಪಿ.12-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಐ ಪಿ ವಕೀಲರಿಂದಃ**

ಆ ದಿನ ಆ ಗುನ್ಹೆ ಸ್ಥಳಕ್ಕೆ ಹಾಜರಾಗುವಂತೆ ಪೋಲಿಸರು ನನಗೆ ನೋಟಿಸು ಕೊಟ್ಟಿರಲಿಲ್ಲ. ಆ ದಿನ ನಾನು ಪೋಲಿಸ ಠಾಣೆಗೆ ಹೋದಾಗ ಮಃ 2 ಗಂಟೆಗಯಾಗಿತ್ತು. ಅಪಘಾತದ ಸ್ಥಳಕ್ಕೆ ಹೋದಾಗ ಮಃ 2.50 ಗಂಟೆಯಾಗಿತ್ತು. ನಾನು ನನ್ನ ಸಹಿಯನ್ನು ಪಂಚನಾಮೆಗೆ ಅದೇ ಸ್ಥಳದಲ್ಲಿ ಮಾಡಿದ್ದೇನೆ. ಆ ಪಂಚನಾಮೆಯು ಎಷ್ಟು ಪುಟಗಳು ಇದ್ದವು ಎಂದು ನೋಡಿಲ್ಲ, ಆದರೆ ಒಂದು ಸಹಿ ಮಾಡಿದ್ದೇನೆ. ಆ ದಿನ ನಾನು ಮತ್ತು ಸಹ ಪಂಚ ಅಭಿಷೇಕ ಹಾಜರಿದ್ದೆವು. ಆ ದಿನ ನಾವು ಆ ಸ್ಥಳದಲ್ಲಿ ಮಃ 2.50 ರಿಂದ 3.45 ವರೆಗೆ ಇದ್ದೆವು. ಆ ಅಪಘಾತವಾದ ಸ್ಥಳದ ಪೂರ್ವಕ್ಕೆ ಃ ಬೇಕರಿ ಇತ್ತು, ಉತ್ತರಕ್ಕೆಃ ರಸ್ತೆ ಇತ್ತು. ಆ ಜಾಗೆಯಿಂದ ನಮ್ಮ ಮನೆ 1 ಕಿಮೀ ದೂರವಿದೆ. ಚಾಸಾ-10 ಇವಳು ನನ್ನ ಜಾತಿಯವಳು, ಆದರೆ ಸಂಬಂಧಿಕಳಲ್ಲ. ನಾನು ಆ ದಿನ ಆ ಸ್ಥಳಕ್ಕೆ ಹೋಗಿಯೇ ಇಲ್ಲ ಮತ್ತು ನನ್ನ ಮುಂದೆ ಪಂಚನಾಮೆ ಮಾಡಿಲ್ಲ. ಚಾಸಾ-10 ಇವಳು ನನ್ನ ಸಂಬಂಧಿಕಳಾದ ಕಾರಣ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪೋಲಿಸರು ಮಿಶ್ರಾ ಜಪ್ತಿಪಂಚನಾಮೆ ಮಾಡಿಲು ನನಗೆ ನೋಟಿಸು ಕೊಟ್ಟು ಕರೆಸಿಲ್ಲ. ಆ ಪಂಚನಾಮೆ ಮಾಡಲು ನನಗೆ ಕರೆಸಿಲ್ಲ ಅಂದರೆ ಸರಿಯಲ್ಲ. ಆ ಪಂಚನಾಮೆಯನ್ನು ನನ್ನ ಮುಂದೆ ಮಾಡಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.